# ಸಮಾಜ ಸೇವೆಯಲ್ಲಿ ಪ್ರವೀಣ, ಕಾಡಬೆಟ್ಟು ಘಟಕದ "ಪ್ರವೀಣ"



ಪ್ರವೀಣ್ ಪೂಜಾರಿ ಇವರದು ಬಂಟ್ವಾಳ ತಾಲ್ಲೂಕಿನ ಕಾಡಬೆಟ್ಟುವಿನ ಸುತ್ತಮುತ್ತಲಿನ ಗ್ರಾಮದವರಿಗೆ ಚಿರಪರಿಚಿತ ಹೆಸರು.

ಸಾಮಾಜಿಕ ಕಳಕಳಿ ಹೊಂದಿರುವ ಇವರು ವಿಪತ್ತಿನ ಸಮಯದಲ್ಲಿ ಆಪತ್ಬಾಂಧವರಾಗುತ್ತಾರೆ. ಸಮಯ ಯಾವುದೇ ಇರಲಿ ರಾತ್ರಿ, ಹಗಲು ಎನ್ನದೇ ಕಷ್ಟ ಹೇಳಿಕೊಂಡು ಕರೆ ಮಾಡಿದವರಿಗೆ ಕ್ಲಪ್ತ ಸಮಯದಲ್ಲಿ ನೆರವಿಗೆ ನಿಲ್ಲುತ್ತಾರೆ. ಇತರರ ಕಷ್ಟಗಳನ್ನು ಅರಿತುಕೊಂಡು ತನ್ನ ಕೈಲಾದ ಸಹಾಯ ಮಾಡುವ ಗುಣ ಹೊಂದಿರುವ ಇವರು ಸಾಮಾಜಿಕ ಸೇವೆಯಲ್ಲಿ ಮಾತ್ರವಲ್ಲದೇ ವಿಪತ್ತು ನಿರ್ವಹಣಾ ಸೇವೆಯಲ್ಲಿಯೂ 'ಪ್ರವೀಣ' ರಾಗಿದ್ದಾರೆ.

ಶೌರ್ಯ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕಾಡಬೆಟ್ಟು ಗ್ರಾಮದ ಪ್ರವೀಣ್ ಪೂಜಾರಿ ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಘಟಕ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸ್ನೇಹಿತರ ಜೊತೆಗೆ ಸೇರಿಕೊಂಡು ಮದ್ಯವ್ಯಸನಿಯಾಗಿದ್ದ ಪ್ರವೀಣ್ ಇವರು ಶ್ರೀ



ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಡೆಸಲ್ಪಡುವ ಮದ್ಯವರ್ಜನ ಶಿಬಿರಕ್ಕೆ ಸೇರ್ಪಡೆಗೊಂಡು ಕುಡಿತವನ್ನು ಬಿಟ್ಟಿರುತ್ತಾರೆ. 17 ವರ್ಷದ ಹಿಂದೆ ನಡೆದ 214 ನೇ ಶಿಬಿರದಲ್ಲಿ ಸೇರ್ಪಡೆಗೊಂಡ ಇವರು ತಾವು ಕುಡಿತ ಬಿಟ್ಟಿರುವುದು ಮಾತ್ರವಲ್ಲದೇ ಅನೇಕ ತನ್ನ ಸ್ನೇಹಿತರನ್ನೂ ಮನವೊಲಿಸಿ ಕುಡಿತ ಬಿಡುವಂತೆ ಮಾಡುವಲ್ಲಿ ಯಶಸ್ವೀಯಾಗಿದ್ದಾರೆ.

ಶೌರ್ಯ ತಂಡದ ಸಕ್ರೀಯ ಸದಸ್ಯರಾಗಿರುವ ಇವರು ಕಳೆದ ಮೂರು ವರ್ಷಗಳಲ್ಲಿ ಶೌರ್ಯ ವಿಪತ್ತು ನಿರ್ವಹಣಾ ತಂಡದಿಂದ ನಡೆಸಲಾಗುವ ಮಾಸಿಕ ಶ್ರಮದಾನಗಳು ಮಾತ್ರವಲ್ಲದೇ ಅನೇಕ ಇತರೇ ಶ್ರಮದಾನಗಳಲ್ಲಿಯೂ ಭಾಗವಹಿಸಿ ಸೇವೆ ಸಲ್ಲಿಸಿರುತ್ತಾರೆ.

ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತೆ, ದೇವಸ್ಥಾನದಲ್ಲಿ ಸ್ವಚ್ಛತೆ, ಬಡ ಕುಟುಂಬಕ್ಕೆ ಮನೆ ರಚನೆ,



ಮನೆ ರಿಪೇರಿ ಕೆಲಸಗಳು, ಶೌಚಾಲಯ ರಚನೆ, ಶಾಲೆಯಲ್ಲಿ ಸ್ವಚ್ಛತೆ, ಗಿಡ ನಾಟಿ ಹೀಗೆ 100 ಕ್ಕೂ ಹೆಚ್ಚು ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ರಸ್ತೆ ಅಪಘಾತಕ್ಕೆ ಸ್ಪಂದನೆ, ಮಳೆಗಾಲದಲ್ಲಿ ರಸ್ತೆಯ ಮೇಲೆ ಹಾಗೂ ಮನೆಯ ಮೇಲೆ ಬಿದ್ದ ಮರ ತೆರವು, ಭೂ ಕುಸಿತ ಮುಂತಾದ ವಿಪತ್ತಿನ ಸಂದರ್ಭದಲ್ಲಿ ಸ್ಪಂದಿಸುವ ಕೆಲಸವನ್ನು ಮಾಡಿರುತ್ತಾರೆ.

ಜನಜಾಗೃತಿ ವೇದಿಕೆಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿರುವ ಇವರು ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಪ್ರತಿನಿಧಿಯಾಗಿ ತಂಡದ 15 ಮಂದಿ ಸದಸ್ಯರನ್ನು ವಿಶ್ವಾಸದಿಂದ ಒಗ್ಗೂಡಿಸಿಕೊಂಡು ಘಟಕವನ್ನು ಸಕ್ರೀಯವಾಗಿರುವಂತೆ ನೋಡಿಕೊಂಡಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಎಲ್ಲಾ ಕಾರ್ಯಕ್ರಮಗಳಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಇವರ ಸೇವೆಗಳನ್ನು ಗುರುತಿಸಿದ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಸೇವೆಗಳ ಮೂಲಕವೇ ಇವರು ಆಪತ್ಬಾಂಧವ ಎನ್ನಿಸಿಕೊಂಡಿದ್ದಾರೆ.

**ವರದಿ: ಜನಜಾಗೃತಿ ಪ್ರಾದೇಶಿಕ ವಿಭಾಗ**